ಬೆಂಗಳೂರು ಕಲಾ ಆಯೋಗದ ಅಧ್ಯಕ್ಷರ ಅವಧಿ ಬಗ್ಗೆ

302(169) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೆಂಗಳೂರು ಕಲಾ ಆಯೋಗ (ಅರ್ಬನ್ ಆರ್ಟ್ ಕಮಿಷನ್) ಎಂದಿನಿಂದ ಅಸ್ತಿತ್ವಕ್ಕೆ ಬಂದಿದೆ.

ಆ) ಅಲ್ಲಿಂದ ಇಲ್ಲಿಯವರೆಗೆ ಈ ಆಯೋಗದ ಅಧ್ಯಕ್ಷರಾದವರು ಯಾರು ಯಾರು ಹಾಗೂ ಪ್ರತಿಯೊಬ್ಬ ಅಧ್ಯಕ್ಷರ ಅವಧಿ ಎಷ್ಟು ?

ಇ) ಈ ಆಯೋಗಕ್ಕೆ ಅಧ್ಯಕ್ಷರನ್ನು ಹೊರತು ಪಡಿಸಿ ಇತರ ಅಧಿಕಾರೇತರನ್ನು ಸರ್ಕಾರ ನೇಮಿಸಿದೆಯೇ?

ಈ) ಹಾಲಿ ಅಧ್ಯಕ್ಷರ ಅವಧಿ ಎಂದು ಮುಕ್ತಾಯಗೊಳ್ಳುತ್ತದೆ.?

ಶ್ರೀ ಪಿ.ಜಿ.ಆರ್.ಸಿಂಧ್ಯ (ನಗರಾಭಿವೃದ್ಧಿ ಸಚಿವರು) :

ಇ)- ಇಲ್ಲ -

ಈ) 31-5-1999

ಬೆಂಗಳೂರು ಕಲಾ ಆಯೋಗವನ್ನು ರದ್ದು ಗೊಳಿಸುವ ಬಗ್ಗೆ

303(171) ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೆಂಗಳೂರು ನಗರ ಕಲಾ ಆಯೋಗವು (ಅರ್ಬನ್ ಆರ್ಟ್ಸ್ ಕಮಿಷನ್) 1998-99ನೇ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳೇನು?

ಆ) 1998-99ನೇ ಸಾಲಿನಲ್ಲಿ ಆ ಆಯೋಗಕ್ಕೆ ಸರ್ಕಾರ ನೀಡಿರುವ ಅನುದಾನವೆಷ್ಟು?

ಇ) ಈ ಆಯೋಗವನ್ನು ರದ್ದುಗೊಳಿಸಿ ಇದರ ಕಾರ್ಯವ್ಯಾಪ್ತಿಯನ್ನು ಬೆಂಗಳೂರು ಮಹಾನಗರಪಾಲಿಕೆಗೆ ನೀಡುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಅನುಬಂಧದಲ್ಲಿ ವಿವರಿಸಲಾಗಿದೆ.

ಆ) 9 ಲಕ್ಷ ರೂಪಾಯಿಗಳು

ಇ)-ಇಲ್ಲಾ-

ಅನುಬಂಧ

ಬೆಂಗಳೂರು ಮಹಾನಗರ ಪಾಲಿಕೆಯ ಆಯೋಗದ ಅನುಮೋದನೆಗಾಗಿ ಸಲ್ಲಿಸಿರುವ ಈ ಮುಂದಿನ ಯೋಜನೆಗಳನ್ನು ಪರಿಶೀಲಿಸಲಾಗಿದ್ದು ಬೆಂಗಳೂರು ಮಹಾನಗರ ಪಾಲಿಕೆಗೆ ಟೀಕೆ :ಸಲಹೆ : ನಿರ್ದೇಶನಗಳನ್ನು ನೀಡಲಾಗಿದೆ.

1) ಎಲ್. ಪಿ. ಸಂಖ್ಯೆ . 434: 97-98- ಯೋಜನೆ ನಿವೇಶನ ಸಂಖ್ಯೆ. 60, ಕೆ. ಆರ್. ರಸ್ತೆ, ಬಸವನ ಗುಡಿ, ಬೆಂಗಳೂರು- ಬಸವನಗುಡಿ ಯೂನಿಯನ್ ಮತ್ತು ಸರ್ವೀಸ್ ಕ್ಲಬ್.

ಆಯೋಗವು 7-4- 1998ರಂದು ಸ್ಥಳ ಪರಿಶೀಲನೆ ಮಾಡಿತು. ಕ್ಲಬ್‌ನ ಮುಂಭಾಗದ ಉಬ್ಬುತಗ್ಗುಗಳಾಗಿರುವ ಅಸ್‌ಬೆಸ್ಟನ್ ಮೇಲ್ಛಾವಣಿಯ ಸಣ್ಣ ಭಾಗಕ್ಕೆ ಮಂಗಳೂರು ಹೆಂಚನ್ನು ಹೊದಿಸಲು ಉದ್ದೇಶಿಸಲಾಗಿದೆ ಎಂದು ಕ್ಲಬ್‌ನ ಕಾರ್ಯದರ್ಶಿಯವರು ವಿವರಿಸಿದರು. ಈಗಾಗಲೇ ಮಂಗಳೂರು ಹೆಂಚನ್ನು ಹೊದಿಸಿರುವುದರಿಂದಾಗಿ ಕಟ್ಟಡದ ಹೊರನೋಟವು ಇದರಿಂದ ಇನ್ನಷ್ಟು ಹೆಚ್ಚುವುದೆಂದು ಆಯೋಗವು ಅಭಿಪ್ರಾಯ ಪಟ್ಟಿತು . ಅಲ್ಲದೆ, ಅದಕ್ಕೆ ಅನುಮೋದನೆ ನೀಡುವಾಗ ಕಟ್ಟಡದ ಕೆಲವು ಹಳೆಯ ಭಾಗಗಳಿಗೆ ದುರಸ್ತಿ ಮಾಡುವಂತೆ ಮತ್ತು ಬಣ್ಣವನ್ನು ಸಹ ಅಚ್ಚುವಂತೆ ಸಲಹೆ ನೀಡಿದೆ.

2) ಎಲ್. ಪಿ. ಸಂಖ್ಯೆ. 301: 97-98- ಮೈಸೂರು ಇಂಟರ್ ಕಾಂಟಿನೆಂಟಲ್ ಹೋಟೆಲ್, ಮಿಲ್ಲರ್ ರಸ್ತೆ.

ಈ ಯೋಜನಾ ನಿವೇಶನವನ್ನು ದಿನಾಂಕ 19- 5- 1998ರಂದು ಆಯೋಗವು ಪರಿಶೀ ಲಿಸಿತು. ಮೂರು ತಳಪಾಯ ಮಟ್ಟದ, ಒಂದು ನೆಲಮಟ್ಟದ ಹಾಗೂ ಐದು ಮೇಲಂತಸ್ತುಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಎಂಬುದನ್ನು ಗಮನಿಸಿತು. ಆದರೂ ಅದು ಬೆಂಗಳೂರಿನಲ್ಲಿ ಮುಖ್ಯ ವಾದ ಕಟ್ಟಡಕ್ಕೆ ಅನುಮತಿ ನೀಡಬಹುದಾದ ಕನಿಷ್ಠ ಸಂಖ್ಯೆಯ ಮೇಲ್ಚಾಗಗಳಿಗೆ ಮತ್ತು ಗರಿಷ್ಠ ಎತ್ತರಕ್ಕೆ ಸಂಬಂಧಪಟ್ಟಂತೆ ನೀಡಲಾಗಿದ್ದ ಮಾರ್ಗದರ್ಶಕಗಳಿಗೆ ಅನುಸಾರವಾಗಿರಲಿಲ್ಲ. ಆದ್ದರಿಂದ ಆಯೋ ಗವು ಅನುಮತಿ ನೀಡುವ ಮಹಡಿಗಳ ಸಂಖ್ಯೆ- 3 ತಳಪಾಯ ಅಂತಸ್ತು, ಒಂದು ನೆಲಅಂತಸ್ತು ಮತ್ತು 4 ಮೇಲಂತಸ್ತುಗಳಿರಬೇಕೆಂದು ನಿಯಮಿಸಿ ಯೋಜನೆಗೆ ಅಂಗೀಕಾರ ನೀಡಿತು.

36) ಎಲ್ ಡಿ. ಸಂಖ್ಯೆ. 530: 96-97- ಸಂಖ್ಯೆ. 12: 12: 1, ಕಸ್ತೂರಿಬಾ ರಸ್ತೆ, ಬೆಂಗಳೂರು : : ವಾಣಿಜ್ಯ ಕಟ್ಟಡಗಳ ನಿರ್ಮಾಣ :

ಈ ಕಡತವನ್ನು ಪರಿಶೀಲಿಸಿದಾಗ ಅಸಂಬದ್ಧವಾಗಿ ಕಂಡುಬರುವ ಮ್ಯಾಜನೈನ್ ಅಂತಸ್ತು ಎಂಬ ಪರಿಭಾಷೆಯನ್ನು ಸಹಿತ ಮೂರು ಮ್ಯಾಜನೈನ್ ಅಂತಸ್ತುಗಳನ್ನು ಒದಗಿಸುವ ಬಗ್ಗೆ ಒಳಗೊಂಡಿರುವುದನ್ನು ಆಯೋಗ ಗಮನಿಸಿತು. ಟೌನ್ ಪ್ಲಾನಿಂಗ್‌ನ ಜಂಟಿ ಕಾರ್ಯದರ್ಶಿ, ಬೆಂಗಳೂರು ಮಹಾನಗರ ಪಾಲಿಕೆಯವರಿಗೆ ಪರಿಷ್ಕೃತ ಪತ್ರ ಮತ್ತು ಪರಿಶೀಲನಾ ಪಟ್ಟಿಯನ್ನು (ಚೆಕ್‌ಲಿಸ್ಟ್) ಕಳುಹಿಸುವಂತೆ ಕೋರಲಾಯಿತು.

3ಕ್ಕೆ ಬದಲಾಗಿ ಕೇವಲ ಒಂದು ಮ್ಯಾಜನೈನ್ ಅಂತಸ್ತಿನ ಬಗ್ಗೆ ಕೋರಲಾದ ಪರಿಷ್ಕೃತ ಪತ್ರ ವನ್ನು ಸ್ವೀಕರಿಸಿದ ನಂತರ ದಿನಾಂಕ 23- 5- 98ರಂದು ಆಯೋಗವು ನಿವೇಶವನ್ನು ಪರಿಶೀಲಿಸಿತು.

ಶಬ್ದಮಾಲಿನ್ಯವನ್ನು ತಡೆಯಲು ಹಾಗೂ ಗಾಜಿನ ಗುಮ್ಮಟವನ್ನು ಸಾಧ್ಯವಾದ ಮಟ್ಟಿಗೆ ರಕ್ಷಿಸುವ ಎರಡೂ ಉದ್ದೇಶದಿಂದ ಗೋಡೆಗಳ ಮುಂಭಾಗದಲ್ಲಿ ಯೋಜನಾ ನಿವೇಶನದ ಉದ್ದಕ್ಕೂ ದೊಡ್ಡ ಸಾಲುಮರಗಳ ತೆರೆಯನ್ನು ಬೆಳೆಸಬೇಕೆಂಬ ಸಲಹೆಯೊಂದಿಗೆ ಯೋಜನೆಗೆ ಅನುಮತಿ ನೀಡಲಾಯಿ ತು. ಅಲ್ಲದೆ, ಯೋಜನೆಯಲ್ಲಿರುವ ಗೋಡೆಯ ಮುಂಭಾಗದಲ್ಲಿರುವ ಎರಡು ದೊಡ್ಡ ಮರಗಳನ್ನು ಉಳಿಸುವಂತೆ ಸೂಚಿಸಲಾಯಿತು.

4) ಎಲ್‌ಪಿ. ಸಂಖ್ಯೆ. 336:97-98- ಸಂಖ್ಯೆ. 56, 57 ಮತ್ತು 58ರ ಮೆಜಿಸ್ಟಿಕ್ ವೃತ್ತದಲ್ಲಿ ವಾಣಿಜ್ಯ ಕಟ್ಟಡಗಳ ನಿರ್ಮಾಣ:

ಆಯೋಗವು ನಿವೇಶನವನ್ನು ಪರಿಶೀಲಿಸಲಾತು ಮತ್ತು ಸೆಟ್‌ಬ್ಯಾಕ್ ಹಾಗೂ ಇತರ ಅಗತ್ಯತೆಗಳಿರಬೇಕಾದ ರೀತಿಯನ್ನು ಸೂಚಿಸಿರುವುದನ್ನು ಬಿಟ್ಟು ಕಟ್ಟಡದ ಉಳಿದೆಲ್ಲ ಅಂಶಗಳೂ ತೃಪ್ತಿಕರವಾಗಿರುವುದನ್ನು ಗಮನಿಸಿತು. ಯೋಜನೆಗೆ ಅಂಗೀಕಾರ ನೀಡವಾಗ ಸಮಾಪದಲ್ಲಿಸ ಕೆಂಪೇಗೌಡ ರಸ್ತೆಯಲ್ಲಿರುವ 'ಗುಪ್ತಮಾರ್ಕೆಟ್' ಕಟ್ಟಡ ಇರುವುದನ್ನು ಆಯೋಗವು ಗಮನಿಸಿ ಆ ಕಟ್ಟಡದ ಹಿಂಭಾಗದ ಗೋಡೆಗಳು, ತೀವ್ರಕರ ಶಿಥಲಾವಸ್ಥೆಯಲ್ಲಿರುವಂತೆ ಕಂಡುಬಂದು ಅತಿ ಶೀಘ್ರವಾಗಿ ಕುಸಿಯುಂತಿದ್ದಿತು. ಆಯೋಗವು ಈ ಅವಕಾಶವನ್ನು ಉಪಯೋಗಿಸಿಕೊಂಡು ತ್ವರಿತ ಕ್ರಮ ತೆಗೆದುಕೊಳ್ಳುವಂತೆ ಬೆಂಗಳೂರು ಮಹಾನಗರ ಪಾಲಿಕೆಯ ಸಂಬಂಧಪಟ್ಟ ಇಲಾಖೆಗೆ ಸಲಹೆ ನೀಡಿತು.

5) ಕಬ್ಬನ್‌ಪಾರ್ಕಿನ ದ್ವಿಚಕ್ರವಾಹನದ ನಿಲುಗಡೆ ಪಕ್ಕದ ಪ್ರವೇಶದ್ವಾರ ವಾರ್ಡ್. 77- ಬೆಂಗಳೂರು- 1 ಇಲ್ಲಿ ಸಾರ್ವಜನಿಕ ದೂರವಾಣಿ ಕೇಂದ್ರದ ಸ್ಥಾಪನೆಗೆ ಅನುಮತಿ:

ಮೇಲ್ಕಂಡ ವಿಷಯ ಕುರಿತು ಈ ಆಯೋಗದ ಒಬ್ಬ ಸದಸ್ಯರಿಗೆ ಕಳುಹಿಸಲಾಗಿದ್ದ ಪತ್ರವನ್ನು ಆಯೋಗಕ್ಕೆ ಸಲ್ಲಿಸಲಾಗಿತ್ತು. ಪೆಟ್ಟಿ ಅಂಗಡಿ ಇರುವ ಸ್ಥಳವು ಸಾರ್ವಜನಿಕ ಉಪಯೋಗ ದೃಷ್ಟಿಯಿಂದ ಒಪ್ಪಿಕೊಳ್ಳಬಹುದಾಗಿದ್ದರಿಂದ, ಬಣ್ಣವನ್ನು ಮಾತ್ರ ಗಾಢ ಹಸಿರು ಬಣ್ಣಕ್ಕೆ ಬದಲಾಯಿಸುವ ಅವಶ್ಯಕತೆಯಿದ್ದು, ಇದರಿಂದ ಸುತ್ತಲಿರುವ ಮರಗಳು ಹಾಗೂ ಕಬ್ಬನ್‌ಪಾರ್ಕಿನ ಸಂಸ್ಕೃತಿಗೆ ಹೊಂದಿಕೊಳ್ಳುವುದೆಂಬುದನ್ನು ಆಯೋಗವು ಗಮನಿಸಿತು. ಮೇಲ್ಕಂಡ ವಿಶ್ಲೇಷಣೆಯೊಂದಿಗೆ ಯೋಜನೆಗೆ ಅಂಗೀ ಕಾರ ನೀಡಲಾಯಿತು.

6) ಎಲ್‌ಪಿ. ಸಂಖ್ಯೆ. 85:98-99- ಸಂಖ್ಯೆ. 7, ಎಂ.ಜಿ.ರಸ್ತೆ, ಶ್ರೀಮತಿ ತಿರುಕಮಲ-ಇಲ್ಲಿ ವಾಣಿಜ್ಯ ಕಟ್ಟಡದ ನಿರ್ಮಾಣ:

ಈಗಾಗಲೇ ಅನೇಕ ದೊಡ್ಡ ಕಟ್ಟಡಗಳಿರುವ ಎಂ.ಜಿ.ರಸ್ತೆಯ ಅದೇ ಪ್ರದೇಶದಲ್ಲಿ ಮತ್ತೊಂದು ದೊಡ್ಡ ಕಟ್ಟಡಕ್ಕಾಗಿ ಪ್ರಸ್ತಾವವನ್ನು ಸಲ್ಲಿಸಲಾಗಿತ್ತು. ಈ ಯೋಜನೆಯನ್ನು ಕೈಗೊಂಡಲ್ಲಿ ಸಂಚಾರ ದಟ್ಟಣೆಯನ್ನೊಳಗೊಂಡು ಹೆಚ್ಚಿನ ವ್ಯತಿರಿಕ್ತ ಪರಿಣಾಮವುಂಟಾಗಬಹುದೆಂದು ಭಾವಿಸಲಾಯಿತು. ಮೇಲ್ಕಂಡ ದೃಷ್ಟಿಯಿಂದ ಎಲ್ಲ ಅಂಶಗಳನ್ನೂ ಎಚ್ಚರಿಕೆಯಿಂದ ಪರಿಶೀಲಿಸಿದ ನಂತರ ಆಯೋಗವು ಈ ಪ್ರಸ್ತಾಪವನ್ನು ಬಿಟ್ಟುಬಿಡಬಹುದು ಹಾಗೂ ಸಣ್ಣಗಾತ್ರದ ಹಾಗೂ ಕಡಿಮೆ ದುಷ್ಪರಿಣಾಮದ ಕಟ್ಟಡವನ್ನು ನಿರ್ಮಿಸುವ ಪ್ರಸ್ತಾಪವನ್ನು ಸಲ್ಲಿಸಬಹುದೆಂದು ಕಟ್ಟಡ ನಿರ್ಮಾಪಕರಿಗೆ ಸೂಚಿಸಿತು. ಈ ಸಂಬಂಧದಲ್ಲಿ ಆಯೋಗವು ನಿರ್ದಿಷ್ಟ ಪ್ರಮುಖ ರಸ್ತೆಗಳ ವಾಹನ ಸಂಚಾರ ಮತ್ತು ಸಂಬಂಧಿತ ಚಟುವಟಿಕೆಗಳನ್ನು ಹೊರುವ ಸಾಮರ್ಥ್ಯ ದೃಷ್ಟಿಯಿಂದ ಸಂಚಾರ ಸಾಮರ್ಥ್ಯ ಎಂಬ ಪರಿಕಲ್ಪನೆಯನ್ನು ಆಯೋಗವು ಸೂಚಿಸಿದೆ.

7) ಪತ್ರ ಸಂಖ್ಯೆ 829, ದಿನಾಂಕ 19-6- 1998-ಮುಖ್ಯ ವಾಸ್ತುಶಿಲ್ಪಿ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಂದ ಸುದರ್ಶನ ಗೆಸ್ಟ್‌ಹೌಸ್‌ನಲ್ಲಿ ವಿಧಾನಪರಿಷತ್ತಿನ ಸದಸ್ಯರಿಗಾಗಿ ಮನೆಗಳು ನಿರ್ಮಾಣ :

ಆಯೋಗವು, ಯೋಜನೆಗೆ ಸಂಬಂಧಪಟ್ಟ ನಕ್ಷೆಗಳನ್ನು ಕಳುಹಿಸಬೇಕೆಂದು ಮುಖ್ಯ ವಾಸ್ತುಶಿಲ್ಪಿಗಳನ್ನು ಕೋರಿದ್ದು, ಅವುಗಳನ್ನು ಸ್ವೀಕರಿಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿತು.

8) ಎಲ್‌ಪಿ ಸಂಖ್ಯೆ. 32 I: 97-98-ಕರ್ನಾಟಕ ಕ್ರಿಕೆಟ್ ಸಂಸ್ಥೆಯಲ್ಲಿ ಸಣ್ಣ ಪೆವಿಲಿಯನ್, ಜೇಂಜ್ ಓವರ್ ರೂಂ, ಟೆನಿಸ್ ಪೆವಿಲಿಯನ್ ಮತ್ತು ಕ್ವಾಶ್‌ಕೋರ್ಟುಗಳ ನಿರ್ಮಾಣ :

ಯೋಜನೆಯ ಪರಿಶೀಲನೆಯ ನಂತರ ಯೋಜನಾ ಪ್ರತಿಪಾದಕರೊಂದಿಗೆ ವಿವರವಾಗಿ ಚರ್ಚಿಸಿದ ನಂತರ ಕೆಲವೊಂದು ಅಭಪ್ರಾಯಗಳನ್ನು ನೀಡಿ ಆಯೋಗವು ಯೋಜನೆಗೆ ಅಂಗೀಕಾರ ನೀಡಿತು. ಆ ಪೈಕಿ ಒಂದು ವಿಶ್ಲೇಷಣೆ ಹೀಗಿದೆ. ಕ್ರೀಡಾಂಗಣದ ಒಳಗೆ ಕೆಲವೊಂದು ಪ್ರಕಟಣ ಫಲಕ ಗಳಿದ್ದು, ಈ ಬಗ್ಗೆ ಆಯೋಗವು ಈ ಹಿಂದೆಯೇ ಕ್ರಿಕೆಟ್ ಸಂಸ್ಥೆಗೆ ಸೂಚನೆ ನೀಡಿತು. ಸಂಸ್ಥೆಯ ಅಧಿಕಾರಿ ಗಳು ಪ್ರಕಟಣ ಫಲಕಗಳ ಏಜೆನ್ಸಿಯೊಂದಿಗೆ ಮಾಡಿಕೊಳ್ಳಲಾಗಿದ್ದ ಒಪ್ಪಂದವು 31ನೇ ಮಾರ್ಚ್ 1998 ರಂದು ಕೊನೆಗೊಂಡಿದ್ದು ಆ ಬಗ್ಗೆ ನೋಟಿಸುಗಳನ್ನೂ ಕೂಡ ನೀಡಲಾಗಿದೆಯೆಂದು ತಿಳಿಸಿದ್ದಾರೆ. ಆದರೂ, ಪ್ರಕಟಣ ಫಲಕಗಳ ಏಜೆಂಟರು ತಡೆಯಾಜ್ಞೆಯನ್ನು ತಂದಿದ್ದು, ತಡೆಯಾಜ್ಞೆಯನ್ನು ಹಿಂ ತೆಗೆದುಕೊಂಡ ಕೂಡಲೇ ಅವುಗಳನ್ನು ಅಲ್ಲಿಂದ ತೆಗೆದುಹಾಕಲಾಗುವುದಾಗಿ ಆಯೋಗಕ್ಕೆ ಭರವಸೆ ನೀಡಿದೆ.

9) ಇನ್‌ಫೆಂಟ್ರಿ ರಸ್ತೆಯಲ್ಲಿರುವ ಪೋಲೀಸ್ ಕಮಿಷನರ್ ರವರ ಕಛೇರಿ, ಬೆಂಗಳೂರು-ಇಲ್ಲಿನ ಕಾಂಪೌಂಡ್ ಗೋಡೆಯ ನವೀಕರಣ :

ಸ್ಥಳ ಪರಿಶೀಲನೆಯ ತರುವಾಯ, ಪ್ರಸ್ತಾಪದ ಬಗ್ಗೆ ಪೋಲೀಸ್ ಕಮಿಷನರ್ ಚರ್ಚಿಸಿದಾಗ ಅವರು ಅದರ ಅಗತ್ಯತೆಯ ಬಗ್ಗೆ ವಿವರಿಸಿದರು.

ಕಮಿಷನರವರ ಕಛೇರಿಗೆ ಹೋಗಿ ಬರುವ ವಾಹನ ಸಂಚಾರದ ಅವಶ್ಯಕತೆಯನ್ನು ಪರಿಗ ಣಿಸಿ, 'ಕಾಣದತಿರುವ 'ನ್ನು (ಬ್ಲೈಂಡ್ ಕರ್ವ್)ತಪ್ಪಿಸುವ ದೃಷ್ಟಿಯಿಂದ ಗೋಡೆಯ ಪೂರ್ವ ಭಾಗದಲ್ಲಿರುವ ಗೋಡೆಗೆ ಬದಲಾಗಿ ಕಬ್ಬಿಣದ ಗ್ರಿಲ್ಲನ್ನು ಹಾಕುವ ಪ್ರಸ್ತಾಪವು ತಾತ್ಕಾಲಿಕ ಕ್ರಮವಾಗಿ ಒಬ್ಬ ಬರಹುದಾಗಿರುವುದರಿಂದ ಇದನ್ನು ಅನುಮೋದಿಸಲಾಗಿದೆ. ಆ ಪ್ರದೇಶ ಮತ್ತು ಮುಖ್ಯ ಕಟ್ಟಡದ ಲಕ್ಷಣಕ್ಕೆ ಹೊಂದುವ ರೀತಿಯಲ್ಲಿ ಪ್ರವೇಶವನ್ನು ಮರು ವಿನ್ಯಾಸಗೊಳಿಸುವ ಭರವಸೆಯ ಮೇಲೆ ಆಯೋಗವು ಇದನ್ನು ಒಂದು ತಾತ್ಕಾಲಿಕವಾಗಿ ಕ್ರಮವಾಗಿ ಅನುಮೋದಿಸಿದೆ.

10) ಈಸ್ಟ್ ಎಂಡ್ ಸರ್ಕಲ್‌ನಲ್ಲಿ ಶ್ರೀ ತೀ.ನಂ ಶ್ರೀಕಂಠಯ್ಯನವರ ಎದೆಮಟ್ಟದ ಮೂರ್ತಿಯನ್ನು ಸ್ಥಾಪಿಸುವುದು:

ಪ್ರಸ್ತಾವಿತ ಮೂರ್ತಿಯಿರುವ ಸ್ಥಳದಲ್ಲಿ ಹಲವಾರು ಸ್ವಾಭಾವಿಕ ಬಂಡೆಗಳಿದ್ದು, ಮಧ್ಯದಲ್ಲಿ ಕೆಲವು ಪೊದೆಗಳು ಮತ್ತು ಕೆಲವು ಸಣ್ಣ ಮರಗಳೂ ಇವೆ. ಜೊತೆಗೆ ಪ್ರಸ್ತುತ ಈ ಆಕರ್ಷಕ ಸ್ಥಳವು ಸ್ಪಷ್ಟವಾಗಿ ಕಾಣಲು ಅಡ್ಡಿಯುಂಟು ಮಾಡುತ್ತಿರುವ ಎರಡು ದೊಡ್ಡ ಪ್ರಕಟಣ ಫಲಕಗಳು ಹಾಗೂ ಕೆಲವು ಕಂಬಗಳು ಇತ್ಯಾದಿಗಳಿದ್ದು, ಅವುಗಳನ್ನು ಬೇರೆಡೆಗೆ ಸಾಗಿಸಬೇಕು. ಈ ಪ್ರಕಟಣ ಫಲಕಗಳನ್ನು ಬೇರೆಡೆಗೆ

ಸಾಗಿಸಲು ಕ್ರಮ ತೆಗೆದುಕೊಳ್ಳಲು ಬೆಂಗಳೂರು ಮಹಾನಗರ ಪಾಲಿಕೆಯನ್ನು ಕೋರಲಾಯಿತು. ಹೀಗೆ ಬೇರೆಡೆ ಸಾಗಿಸಿದಲ್ಲಿ ಮೂರ್ತಿಯನ್ನು ಸ್ಥಾಪಿಸಲು ಆ ಸ್ಥಳವು ಸೂಕ್ತವಾಗುವುದೆಂದು ಆಯೋಗವು ಭಾವಿಸಿತು. ಮೇಲೆ ಹೇಳಿದ ಶ್ರೀ ತೀ.ನಂ.ಶ್ರೀಕಂಠಯ್ಯನವರ ಎದೆಮಟ್ಟದ ಮೂರ್ತಿಯ ಬಗ್ಗೆ ಕೆಲವು ಬದಲಾವಣೆ ಮತ್ತು ಸಲಹೆಗಳನ್ನು ಸೂಚಿಸಿ ಪ್ರಸ್ತಾವಕ್ಕೆ ಅಂಗೀಕಾರ ನೀಡಲಾಯಿತು.

11) ವಿಧಾನಸಭಾ ಸದಸ್ಯರ ಗೃಹ - ವಿಸ್ತೃತಗೊಳಿಸುವುದು, ರಿಪೇರಿಮಾಡುವುದ ಇತ್ಯಾದಿ:

ಕರ್ನಾಟಕ ವಿಧಾನ ಪರಿಷತ್ತಿನ ಅಧ್ಯಕ್ಷರೊಂದಿಗೆ ಸುದೀರ್ಘ ಚರ್ಚೆ ಮತ್ತು ಸರಣಿ ಸಭೆಗಳನ್ನು ನಡೆಸಿದ ಈ ತರುವಾಯ, ಆಯೋಗವು ಕಬ್ಬನ್ ಪಾರ್ಕ್ ಕುರಿತಂತೆ ಸರ್ಕಾರದಿಂದ ನೇಮಕ ಹೊಂದಿದ ಉನ್ನತ ಅಧಿಕಾರಿ ಸಮಿತಿ ಸದಸ್ಯನಾಗಿ ಮತ್ತು ಉಚ್ಚನ್ಯಾಯಾಲಯದ ಆಜ್ಞೆಯ ಪ್ರಕಾರ, ಕೇವಲ ಶಾಸಕರ ಗೃಹದ ಸುತ್ತಮುತ್ತಲ ಪ್ರದೇಶದ ಯಾವುದೇ ಭಾಗದಲ್ಲಿ ಕೂಡ ಈಗ ಕಟ್ಟಡ ನಿರ್ಮಾಣ ಮಾಡುವಂತಹ ಯಾವುದೇ ಪ್ರಸ್ತಾವವನ್ನು ಸದ್ಯಕ್ಕೆ ಕೈಗೆತ್ತಿಕೊಳ್ಳಲಾಗುವುದಿಲ್ಲವೆಂದು ಮತ್ತು ಈ ಸಮಿತಿಯ ಚರ್ಚೆ ಮತ್ತು ನ್ಯಾಯಾಲಯದಲ್ಲಿರುವ ವಿಷಯದ ಇತ್ಯರ್ಥಕ್ಕಾಗಿ ಕಾಯಬೇಕೆಂಬುದಾಗಿ ತಿಳಿಸಿದೆ.

12) ಕಬ್ಬನ ಪಾರ್ಕ್ ಸೆಂಚುರಿ ಕ್ಲಬ್‌ಗೆ ಬೇರೆ ಬೇರೆ ಗೇಟುಗಳನ್ನು ಒದಗಿಸುವುದು:

ಸೆಂಚುರಿ ಕ್ಲಬ್ಬಿನವರು ಮೆಸರ್ಸ್ ಗೋಕುಲದಾಸ್ ಎಕ್ಸ್‌ಪೋರ್ಟ್ಸ್ ಮೂಲಕ ಕೆ.ಆರ್.ವೃತ್ತದ ಬಳಿ ಒಂದು ಗೇಟನ್ನು ಹಾಕಲು ಆಯೋಗದ ಅನುಮತಿ ಕೋರಿದ್ದರು ಕಬ್ಬನ್‌ಪಾರ್ಕ್ ವಿವಾದದ ಬಗ್ಗೆ ನ್ಯಾಯಾಲಯವು ನಿರ್ಧಾರ ತೆಗೆದುಕೊಳ್ಳುವವರೆಗೆ ಈ ವಿಷಯವನ್ನು ಮುಂದೂಡಲಾಗಿದೆ.

13) ಎಲ್.ಡಿ. ಸಂಖ್ಯೆ. 145:98-99- ಕೆಂಪೇಗೌಡ ರಸ್ತೆಯಲ್ಲಿನ ಎಫ್‌ಕೆಸಿಸಿಐನಲ್ಲಿ ಹಾಲಿಯಿರುವ ಕಟ್ಟಡದ ಮೇಲೆ 2ನೇ ಮತ್ತು 3ನೇ ಮಹಡಿಯ ನಿರ್ಮಾಣ :

ಯೋಜಿತ ನಿವೇಶನವನ್ನು ಆಯೋಗವು ದಿನಾಂಕ 18- 11- 1998ರಂದು ಪರಿಶೀಲಿಸಿ, ಆಯೋಗವು ಈ ಮುಂದಿನ ಷರತ್ತುಗಳನ್ನು ವಿಧಿಸಿ ಯೋಜನೆಗೆ ಅಂಗೀಕಾರ ನೀಡಿತು.

1) ಹಳೇ ಕಟ್ಟಡವನ್ನು ಕೆಡವಬಾರದು, ಆದರೆ ಸುಧಾರಣೆ ಮಾಡಬಹುದು ಮತ್ತು ಅದನ್ನು ಮೂಲ ರೂಪದಲ್ಲಿಯೇ ಉಳಿಸಬೇಕು.

2) ಕಛೇರಿಯಾಗಿ ಬಳಸಲಾಗುತ್ತಿರುವ ಈಗಿನ ತಳಭಾಗದ ಕಟ್ಟಡವನ್ನು ಉದ್ದೇಶಿಸಲಾಗಿರುವ ಹೊಸ ಕಟ್ಟಡದ ಕೆಲಸ ಪೂರ್ಣವಾದ ಮೂರು ತಿಂಗಳೊಳಗೆ ಪೂರ್ಣವಾಗಿ ಖಾಲಿ ಮಾಡಬೇಕು ಮತ್ತು ಆ ಸ್ಥಳವನ್ನು ಇತರ ಯಾವುದೇ ಉದ್ದೇಶಕ್ಕೆ ಬಳಸದೆ ಕೇವಲ ವಾಹನ ನಿಲುಗಡೆ ವ್ಯವಸ್ಥೆಗೆ ಮಾತ್ರ ಬಳಸುವುದು.

3) ಹಳೇ ಕಟ್ಟಡ ಮತ್ತು ಉದ್ದೇಶಿತ ಕಟ್ಟಡ ಭಾಗದ ನಡುವಿನ ಮಾರ್ಗವು ವಾಹನ ನಿಲುಗಡೆಗೆ ಎಲ್ಲ ಕೋನಗಳಿಂದ ಅನುಕೂಲವಾಗುವಂತೆ ಇರಬೇಕು.

4) ಹೊಸಕಟ್ಟಡ ಪೂರ್ವ ಭಾಗದಲ್ಲಿ ಹಾಲಿಯಿರುವ ವಾಹನ ನಿಲುಗಡೆ ಪ್ರದೇಶವನ್ನು ನ್ನು ಕ್ರಮಬದ್ಧ ವಾಹನ ನಿಲುಗಡೆಗೆ ಸ್ವಚ್ಛಗೊಳಿಸುವುದು.

5) ಕಟ್ಟಡದ ಸುತ್ತಲು ಮತ್ತು ಅಗತ್ಯವಿರುವ ಸ್ಥಳಗಳಲ್ಲಿ ಮರ, ಪೊದೆಗಳು ಮತ್ತು ಗಿಡಗಳನ್ನು ಬೆಳೆಸುವುದು.

6) ಎಫ್‌ಕೆಸಿಸಿಐ ಮೂಲಕ ಈ ಉದ್ದೇಶಕ್ಕಾಗಿ ಈಗಾಗಲೆ ಗುರುತು ಮಾಡಿರುವ ಸ್ಥಳದಲ್ಲಿ ನೀರಿನ ಕಾರಂಜಿಯನ್ನು ನಿರ್ಮಿಸುವುದು.

7) ಉದ್ದೇಶಿತ ಹೆಚ್ಚುವರಿ ಕಟ್ಟಡದ ಬಣ್ಣದ ಯಥಾ ದೃಶ್ಯ ನಕ್ಷೆಯ ಜೊತೆಗೆ ಸಾದ್ಯತೆಯ ಮೇರೆಗೆ ಒಪ್ಪಿಕೊಂಡಿರುವ ಕೆಲವು ಮುಖ್ಯ ನಕ್ಷೆಗಳನ್ನು ಸೇರಿಸಿ ಸಾಧ್ಯವಾದಷ್ಟು ಶೀಘ್ರವಾಗಿ ಆಯೋಗಕ್ಕೆ ಸಲ್ಲಿಸುವುದು.

14) ಎಲ್‌ಪಿ.ಸಂಖ್ಯೆ .253:98-99-ರೆಸಿಜೆನ್ಸಿ ರಸ್ತೆ, ಸಂಖ್ಯೆ . 16: 32ರಲ್ಲಿ ವಾಣಿಜ್ಯ ಸಂಕೀರ್ಣದ ನಿರ್ಮಾಣ :

ಯೋಜಿತ ಸ್ಥಳವನ್ನು ದಿನಾಂಕ 21- 11- 1998ರಂದು ಆಯೋಗವು ಪರಿಶೀಲಿಸಿತು. ಮೇಲ್ಸಾಗ ಮುಂತಾದವುಗಳಿಗೆ ಅವಕಾಶ ಕಲ್ಪಿಸುವ ಜೊತೆಗೆ ಕಟ್ಟಡದ ಸೌಂದರ್ಯಾತ್ಮಕ ಲಕ್ಷಣವನ್ನೂ ಪರಿಗಣಿಸಲಾಗಿತ್ತು. ಆವರಣದಲ್ಲಿರುವ, ಅಗಾಗ ಕತ್ತರಿಸ ಬೇಕಾಗುವಂತಬ ಸಿಲ್ವರ್ ಓಕ್ ಮರವನ್ನು ಕತ್ತರಿಸಲು ವೃಕ್ಷ ಪ್ರಾಧಿಕಾರವು ಅನುಮತಿ ನೀಡಿದ್ದು ಅದನ್ನು ಆಯೋಗವು ಅನುಮೋದಿಸಿದೆ. ಮೇಲ್ಕಂಡ ಸೂಚನೆಗಳೊಂದಿಗೆ ಪ್ರಸ್ತಾವಕ್ಕೆ ಅನುಮೋದನೆ ನೀಡಲಾಯಿತು.

15) ರಾಜಭವನದ ಆವರಣದೊಳಗೆ ಗಾಜಿನ ಮನೆ ನಿರ್ಮಾಣ :

ಈ ವಿಷಯವನ್ನು ಕರ್ನಾಟಕ ಸನ್ಮಾನ್ಯ ರಾಜ್ಯಪಾಲರೊಂದಿಗೆ ಚರ್ಚಿಸಲಾಯಿತು ಮತ್ತು ಅವರು ಈ ಪ್ರಸ್ತಾಪದ ಮುಂದುವರಿಕೆ ಬಗ್ಗೆ ಒಲವು ತೋರದಿದ್ದುದರಿಂದ ಮೇಲ್ಕಂಡಂತೆ ರಾಜ್ಯಪಾಲರ ಅಭಿಪ್ರಾಯಗಳನ್ನು ಸಂಬಂಧಪಟ್ಟ ಪ್ರಸ್ತಾವಗಳನ್ನು ಸಲ್ಲಿಸಿದ್ದವರಿಗೆ ತಿಳಿಸಿದ ತರುವಾಯ ಪ್ರಸ್ತಾವವನ್ನು ಅವರಿಗೆ ಹಿಂದಿರುಗಿಸಲಾಗಿತ್ತು.

16) ಎಲ್‌ಪಿ. ಸಂಖ್ಯೆ . 106:98-99 ಗುಣಶೀಲ ಪ್ರಸೂತಿ ಗೃಹ, ಬನವನಗುಡಿ - ಇದರ ಹೆಚ್ಚುವರಿ ಕಟ್ಟಡ ನಿರ್ಮಾಣ:

ದಿನಾಂಕ 11- 12- 1998ರಂದು ಯೋಜಿತ ಸ್ಥಳವನ್ನು ಆಯೋಗವು ಪರಿಶೀಲಿಸಿತು. ಹೊಸ ನಿರ್ಮಾಣದ ಸೌಂದರ್ಯಾತ್ಮಕ ಅಂಶಗಳು ಅಂಗೀಕರಿಸಬಹುದಾಗಿ ಕಂಡುಬಂದಿದ್ದರಿಂದ ನರ್ಸಿಂಗ್ ಹೋಂನ ಮುಂದಿರುವ ಚಿಕ್ಕ ತೋಟವನ್ನು ಕಡಿಮೆ ಮಾಡಿ ಆ ಸ್ಥಳದಲ್ಲಿ ಹಸಿರು ಗಿಡಗಳನ್ನು ವಿನ್ಯಾಸಗೊಳಿಸಬಹುದಾಗಿದೆ ಎಂಬ ಸೂಚನೆಗಳೊಂದಿಗೆ ಈ ಯೋಜನೆಯನ್ನು ಅಂಗೀಕರಿಸಲಾಯಿತು.

17) ಕಬ್ಬನ್‌ಪಾರ್ಕ್ ಪ್ರವೇಶ ಸ್ಥಳದಲ್ಲಿ ಕಬ್ಬಿಣದ ಗೇಟನ್ನು ನಿರ್ಮಿಸುವುದು:

ಆಯೋಗಕ್ಕೆ ಒದಗಿಸಲಾದ ನಕ್ಷೆಯ ಪ್ರಕಾರ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

18) ಎಲ್‌ಐ.ಸಂಖ್ಯೆ .98:97-98- ಆವರಣ ಸಂಖ್ಯೆ . 56 ಮತ್ತು 56 : 4ರಲ್ಲಿ ಕಟ್ಟಡ ನಿರ್ಮಾಣ ಅರಮನೆ ರಸ್ತೆ, ಮೆಸರ್ಸ್ ಸಂಡೂರ್ ಮ್ಯಾಂಗನೀಸ್ ಮತ್ತು ಕಬ್ಬಿಣ ಅದಿರು(ಕಂಪನಿ) ಲಿಮಿಟೆಡ್ ಬೆಂಗಳೂರು:

ಇನ್‌ಟ್ಯಾಕ್ (ಐಎನ್‌ಟಿಎಸಿಎಚ್) ಭಾರತ ರಾಷ್ಟ್ರೀಯ ಸಾಂಸ್ಕೃತಿಕ ಮತ್ತು ವಾಸ್ತು ಪರಂಪರೆ ಟ್ರಸ್ಟ್‌ನ ಸಹಯೋಗದೊಡನೆ ತಯಾರಿಸಿದ ಆಯೋಗದ ಸ್ಥಿರವಾದ ಪಟ್ಟಿಗನುಸಾರ ಈ ಕಟ್ಟಡವನ್ನು 'ಪರಂಪರಾಗತ ಕಟ್ಟಡ 'ವೆಂದು ಆಯೋಗವು ಪರಿಗಣಿಸಿದ್ದು, ವಿಶೇಷ ಜಿಲ್ಲಾಧಿಕಾರಿಯವರು ಈ ವಿಷಯವನ್ನು ಮರು ಪರಿಶೀಲಿಸಿ ಈ ಕಟ್ಟಡವನ್ನು ನೆಲಸಮಗೊಳಿಸಲು ನಗರ ಭೂ ಪರಿಮಿತಿ ಆಯೋಗವು ಯಾವ ಪರಿಸ್ಥಿತಿಗಳಿಂದಾಗಿ ಅನುಮತಿ ನೀಡಿತೆಂಬ ಬಗ್ಗೆ ತಿಳಿಸಬೇಕೆಂದು ಕೋರಲಾಗಿದೆ. ಈ ಬಗ್ಗೆ ಸ್ಪಷ್ಟೀಕರಣವನ್ನು ಪಡೆದ ನಂತರ ಆಯೋಗವು ಮನವಿದಾರರ ಅರ್ಜಿಯನ್ನು ಪರಿಗಣಿಸುತ್ತದೆ.

19) ಎಲ್ ಐ.ಸಂಖ್ಯೆ. 333:97-98-ನಂ. 56:2, ಅರಮನೆ ರಸ್ತೆ ಬೆಂಗಳೂರಿನಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣ, ಮೆಸರ್ಸ್ ಸಂಡೂರ್ ಮ್ಯಾಂಗನೀಸ್ ಅದಿರು ಲಿಮಿಟೆಡ್ :

ಬಾಬ್ತು ಸಂಖ್ಯೆ. 18ರ ಉತ್ತರವೇ ಇದಕ್ಕೂ ಅನ್ವಯವಾಗುತ್ತದೆ.

20) ಅರಮನೆ ರಸ್ತೆ, ಕಾರ್ಲ್‌ಟನ್ ಎದುರು ಪೆಟ್ಟಿ ಅಂಗಡಿಯನ್ನು ಪ್ರಾರಂಭಿಸಲು ಆಕ್ಷೇಪಣೆ ಇಲ್ಲ -ಎಂಬ ಬಗ್ಗೆ, ಪ್ರಮಾಣಪತ್ರ ನೀಡಿಕೆ-(ಎನ್ ಒಸಿ) ಶ್ರೀ ಬಿ ಸುರೇಶ್, ನಂ. 25, ಕಾರ್ಲ್‌ಟನ್ ಹೌಸ್, ಬೆಂಗಳೂರು:

ಮನವಿದಾರರು ಒಂದು ಒಳ್ಳೆಯ ಪೆಟ್ಟಿ ಅಂಗಡಿಯನ್ನು ನಿರ್ಮಿಸಿ, ಆಯೋಗಕ್ಕೆ ತೋರಿ ಸಿದ್ದು ಅದನ್ನು ಸ್ಥಾಪಿಸಲು ಉತ್ತಮ ನಿರೀಕ್ಷೆಯಲ್ಲಿದ್ದಾರೆ. ಆಯೋಗವು ಕಾರ್ಲ್‌ಟನ್ ಹೌಸ್ ಗೇಟಿಗೆ ಸ್ವಲ್ಪ ದೂರವಾಗಿ ಜನದಟ್ಟಣೆ ಆಗದಂತೆ ಮತ್ತು ಸ್ಪಷ್ಟವಾಗಿದುವುದನ್ನು ಗಮನದಲ್ಲಿರಿಸಿ, ದಕ್ಷಿಣ ಭಾಗ ದಲ್ಲಿ ಇರುವ ಸಾರ್ವಜನಿಕ ದೂರವಾಣಿ ಬೂತ್ ಹಾಗೂ ದೊಡ್ಡ ಮರದ ನಡುವಣ ಪ್ರದೇಶವನ್ನು ಆಯ್ಕೆ ಮಾಡಿದೆ. ಈ ಪ್ರದೇಶವನ್ನು ಸ್ವಚ್ಛವಾಗಿಡಬೇಕು ಹಾಗೂ ಯಾವುದೇ ಕಸ, ಉಪಯೋಗಿಸಿದ ವಸ್ತುಗಳನ್ನು ಎಸೆಯದಿರುವುದನ್ನು ಖಚಿತಪಡಿಸುವಂತೆ ಮನವಿದಾರರಿಗೆ ಸೂಚಿಸಲಾಗಿದೆ.

21) ಮಾಜಿ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಪ್ರತಿಮೆಯನ್ನು ಸ್ಥಾಪಿಸಲು ಯೋಜನೆ ಹಾಗೂ ಆಧಾರ ಪೀಠದ ವಿನ್ಯಾಸ :

ಹಲವಾರು ಸಭೆಗಳ ನಂತರ ಆಯೋಗವು ಪ್ರಸ್ತಾವಕ್ಕೆ ಮಂಜೂರಾತಿ ನೀಡಿತು.

22) ನೃಪತುಂಗ ರಸ್ತೆಯ ಸಂತ ಮಾರ್ಥಾಸ್ ಆಸ್ಪತ್ರೆಯ ಎದುರು, ಪೆಟ್ಟಿಅಂಗಡಿ ಪ್ರಾರಂಭಿಸಲು ಆಕ್ಷೇಪಣೆ ಇಲ್ಲವೆಂಬ ಬಗ್ಗೆ ಪ್ರಮಾಣಪತ್ರಕ್ಕಾಗಿ -ಶ್ರೀ ದರೂಳ್ :

ರೋಗಿಗಳಿಗೆ ಹಣ್ಣುಗಳನ್ನು ಮಾರಲು ಉತ್ತಮವಾದ ಪೆಟ್ಟಿ ಅಂಗಡಿಯನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನ್ನು ಸಲ್ಲಿಸಲಾಗಿದೆ. ಆಸ್ಪತ್ರೆಯ ಗೇಟಿನ ಪಕ್ಕ ನೆಲದ ಮೇಲೆ ಹಣ್ಣುಗಳನ್ನು ಇಡುವ ಈಗಿನ ವ್ಯವಸ್ಥೆಗೆ ಬದಲಾಗಿ ಸ್ವಚ್ಛವಾಗಿ ಮತ್ತು ಹೆಚ್ಚು ವ್ಯವಸ್ಥಿತವಾಗಿ ಇಡುವ ಅಭಿಪ್ರಾಯವು ಅಂಗೀಕಾರಾರ್ಹವೆಂದು ಕಂಡುಬಂದಿದೆ. ಈ ಕೆಳಕಂಡಂತೆ ಪೆಟ್ಟಿಗೆ ಅಂಗಡಿಯ ಅಳತೆಯು ಇರಬೇಕೆಂದು ಆಯೋಗವು ನಿಗದಿಪಡಿಸಿದೆ :

ನೆಲದಿಂದ 9 ಅಂಗುಲ ಮೇಲಿರಬೇಕು. ಅಳ-4 ಅಡಿ, ಅಗಲ-6 ಅಡಿ.

ಮೇಲಿನ ಷರತ್ತುಗಳು ಮತ್ತು ಸ್ಥಳವನ್ನು ಸೂಚಿಸಿ ರಸ್ತೆಯ ಉತ್ತರ ಭಾಗದ ಮರದ ಸಮೀಪ ಪೆಟ್ಟಿ ಅಂಗಡಿಯನ್ನು ಸ್ಥಾಪಿಸಲು ಅನುಮತಿ ನೀಡಲಾಗಿತ್ತು.

23) ಎಲ್ ಐ ಸಂಖ್ಯೆ : 130:98-99, ನಂ. 20, 11ನೇ ಮುಖ್ಯರಸ್ತೆ, ವಸಂತನಗರದಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣ, ಶ್ರೀಮತಿ ಸಯೀದ ಜಾನು :

ಆಯೋಗವು ದಿನಾಂಕ 24-12-1998ರಂದು ಯೋಜನಾ ನಿವೇಶನವನ್ನು ಪರಿಶೀಲಿಸಿತು. ನೆಲ ಅಂತಸ್ತಿನ ಪ್ರವೇಶದಲ್ಲಿರುವ ಇಟ್ಟಿಗೆ ಗೋಡೆಯ ಬಣ್ಣವನ್ನು ಹಸಿರು ಗ್ರಾನೈಟ್ ಹೊದಿಕೆಯನ್ನು ಉಪಯೋಗಿಸುವ ಮೂಲಕ ಬದಲಾಯಿಸಲು ಮತ್ತು ಬಾಲ್ಕನಿಯಲ್ಲಿ ಸಾಲುರಂಧ್ರವಿರುವ ಸಿಮೆಂಟ್ ಗೋಡೆ ಹಾಕಲು ಸಲಹೆ ನೀಡಲಾಗಿದೆ. ಇದರಿಂದ ಸಾರ್ವಜನಿಕರಿಗೆ ಕಚೇರಿ ಸಿಬ್ಬಂದಿ ಕಾಣುವುದನ್ನು ತಪ್ಪಿಸಬಹುದು. ಮೇಲಿನ ಸಲಹೆಯೊಡನೆ ಯೋಜನೆಗೆ ಅನುಮತಿ ನೀಡಲಾಗಿದೆ.

24) ಕಂಠೀರವ ಕ್ರೀಡಾಂಗಣದಲ್ಲಿ 65.1 ಐಕೆವಿ ವಿದ್ಯುತ್ ಕೇಂದ್ರದ ಸ್ಥಾಪನೆ :

ಸ್ಥಳವನ್ನೇ ಪರಿಶೀಲಿಸಿ ಉದ್ದೇಶಿತ ವಿದ್ಯುತ್ ಕೇಂದ್ರದ ಬಗ್ಗೆ ಬಣ್ಣ ಸಂಸ್ಕರಣೆ ಮಾಡಲಾದ ಯಥಾ ರೂಪದ ನಕ್ಷೆಯನ್ನು ಸಲ್ಲಿಸುವಂತೆ ಮನವಿದಾರರನ್ನು ಕೋರಲಾಯಿತು ಮತ್ತು ಅದನ್ನು ಸಲ್ಲಿಸಿದ ತರುವಾಯ ಆಯೋಗವು ಯೋಜನೆಗೆ ಅಂಗೀಕಾರ ನೀಡುವ ಬಗ್ಗೆ ಪರಿಶೀಲಿಸುತ್ತದೆ.

25) ಲಾಲ್‌ಬಾಗ್ ರಸ್ತೆಯ ಎನ್ 7-7: 1ನಲ್ಲಿ ಹೋಟೆಲ್ ಯೋಜನೆ ನಿರ್ಮಾಣ, ಬೆಂಗಳೂರು, ಮೆಸರ್ಸ್ ಸೋಮಯಾಜಿ ಎಸ್ಟೇಟ್ ಪ್ರೈವೇಟ್ ಲಿಮಿಟೆಡ್- ಎಲ್‌ಪಿ. ಸಂಖ್ಯೆ. 294:93-94:

ಈ ಯೋಜನೆಯ ಸ್ಥಳವನ್ನು ದಿನಾಂಕ 13-1-1999ರಂದು ಆಯೋಗವು ಪರಿಶೀಲಿಸಿತು. ಈಗಾಗಲೇ ರಸ್ತೆಗೆ ಮೇಲು ಸೇತುವೆಯನ್ನು ಹಾಕುವ ಯೋಜನೆ ಬಗ್ಗೆ ನಿರ್ಧರಿಸಲಾಗಿರುವುದರಿಂದ ಸುಂದರವಾದ ಕಟ್ಟಡದ ಮುಂಭಾಗಕ್ಕೆ ತೀವ್ರ ಹಾನಿಯಾಗುವುದು ದುರದೃಷ್ಟಕರ. ಕಟ್ಟಡದ ಯಾವುದೇ ಅಂಶದ ಬಗ್ಗೆ ಆಯೋಗವು ಯಾವುದೇ ಪ್ರತಿಕೂಲ ಅಭಿಪ್ರಾಯ ನೀಡುವುದಿಲ್ಲ. ಮೇಲ್ಕಂಡ ಅಭಿಪ್ರಾಯದೊಂದಿಗೆ ಯೋಜನೆಗೆ ಅಂಗೀಕಾರ ನೀಡಲಾಗಿದೆ.

26) ಬಸವೇಶ್ವರ ವೃತ್ತದಲ್ಲಿ ಸೋಲಾರ್ ಟ್ರಾಫಿಕ್ ಛತ್ರಿಯ ಸ್ಥಾಪನೆ ಬಗ್ಗೆ ಆಕ್ಷೇಪಣೆ ಇಲ್ಲವೆಂಬ ಬಗ್ಗೆ ಪ್ರಮಾಣಪತ್ರ :

ಯೋಜನೆಯನ್ನು ಸಲ್ಲಿಸಿರುವ ಮನವಿದಾರರು ಜಂಟಿ ಪರಿಶೀಲನೆಗೆ ಇನ್ನೂ ಹಾಜರಾಗದಿರುವುದರಿಂದ ಯೋಜನೆಯ ಬಗ್ಗೆ ಅವರಿಂದ ಇನ್ನಷ್ಟು ಮಾಹಿತಿಯನ್ನು ನಿರೀಕ್ಷಿಸಲಾಗಿದ್ದು, ತರುವಾಯ ಆಯೋಗವು ಈ ವಿಷಯವನ್ನು ಮುಂದುವರಿಸುತ್ತದೆ.

27) ಜಿ. ಎಂ. ರವರ ಕಚೇರಿಯ ಮುಂದೆ ಉದ್ಯಾನವನ ನಿರ್ಮಾಣಕ್ಕಾಗಿ [illegible]ಸ್ತಾವನೆ, ಬೆಂಗಳೂರು ದೂರವಾಣಿ ಜಿಲ್ಲೆ, ಕಬ್ಬನ್ ಪಾರ್ಕ್ :

ಮರಗಳಿಂದ ಸುತ್ತುವರಿದ ಸೌಂದರ್ಯಾತ್ಮಕವಾಗಿ ಆಕರ್ಷಕವಾದ ಮೇಲ್ಕಂಡ ಕಟ್ಟಡದ ಬಗ್ಗೆ ಆಯೋಗವು ಮೆಚ್ಚುಗೆ ಸೂಚಿಸುತ್ತಾ ಅದರ ಕಾಂಪೌಂಡಿನ ಹೊರಭಾಗದ ಕಡೆಯಿಂದ ಅದನ್ನು

ದುರುಪಯೋಗ ಪಡಿಸಿಕೊಳ್ಳುವ ಕಾರಣಕ್ಕಾಗಿ ಸಾರ್ವಜನಿಕ ಕಾಲುದಾರಿಗೆ ಬೇಲಿ ಹಾಕುವ ಮೂಲಕ ಖಾಸಗಿ ಉದ್ಯಾನವನವನ್ನು ಸೃಷ್ಟಿಸಲು ಆಯೋಗವು ಅನುಮತಿ ನೀಡಲಿಲ್ಲ. ತೋಟಗಾರಿಕಾ ಇಲಾಖೆಯು ಬೇಲಿಗೆ ಬದಲಾಗಿ ಉತ್ತಮ ಪೊದೆ ಗಿಡ ಬೆಳೆಸಿ ತಡೆಯನ್ನು ನಿರ್ಮಿಸಬಹುದಾಗಿದ್ದು ಇದರಿಂದ ಅಲ್ಲಿ ದೂರಸಂಪರ್ಕ ಇಲಾಖೆಯ ನೌಕರರಿಗೆ ಆ ಪ್ರದೇಶವು ಪರಭಾರೆಗೊಳಿಸುವ ಉದ್ದೇಶವಿರುವುದಿಲ್ಲ ಎಂಬುದಾಗಿ ಶಿಫಾರಸು ಮಾಡಿದೆ.

ಈ ವರದಿ ಸಲ್ಲಿಸಿರುವ ಅವಧಿಯಲ್ಲಿ ಆಯೋಗವು ಈಮುಂದಿನನಿರ್ದಿಷ್ಟಯೋಜನೆಗಳನ್ನು ವಿವರವಾಗಿ ಪರಿಶೀಲಿಸಿದೆ ಮತ್ತು ಬೆಂಗಳೂರು ಮಹಾನಗರ ಪಾಲಿಕೆಗೆ ಮಾರ್ಗದರ್ಶನಗಳು, ಸಲಹೆ ಮತ್ತು ವಿನ್ಯಾಸದಲ್ಲಿ ಮಾರ್ಪಾಡುಗಳನ್ನು ನೀಡಿದೆ.

ಬೆಂಗಳೂರು ನಗರದಲ್ಲಿ ಎರಡು ತಿಂಗಳಿಗೊಮ್ಮೆ ವಿದ್ಯುತ್ ಬಿಲ್ಲು ನೀಡುವ ಪದ್ಧತಿಯನ್ನು ರದ್ದುಗೊಳುಸುವ ಬಗ್ಗೆ

305 (251) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಎರಡು ತಿಂಗಳಿಗೊಮ್ಮೆ ವಿದ್ಯುತ್ ಬಿಲ್ಲು ನೀಡುವ ಪದ್ಧತಿಯನ್ನು ಜಾರಿಗೆ ತರಲಾದ ಭಾಗಗಳು ಯಾವುವು?

ಆ) ಇದರಿಂದ ಬಳಕೆದಾರರು ಒಂದು ತಿಂಗಳಲ್ಲಿಎರಡು ತಿಂಗಳಿನ ಮೊತ್ತ ಹಾಗೂ ಮತ್ತೊಂದು ತಿಂಗಳಲ್ಲಿ ಮುಂಗಡ ಹಣ ಪಾವತಿ ಮಾಡಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇದರಿಂದ ಸಾರ್ವಜನಿಕರಿಗೆ ತೊಂದರೆಗಳಾಗುತ್ತಿರುವುದರಿಂದ ಕೂಡಲೇ ಎರಡು ತಿಂಗಳಿಗೊಮ್ಮೆ ವಿದ್ಯುತ್ ಬಿಲ್ಲು ನೀಡುವ ಪದ್ದತಿಯನ್ನು ಸರ್ಕಾರ ರದ್ದುಗೊಳಿಸಿ ಮೊದಲಿನಂತೆ ಪ್ರತಿತಿಂಗಳು ಬಿಲ್ಲನ್ನು ನೀಡುವ ಪದ್ದತಿಯನ್ನು ಪುನಃ ಆರಂಭಿಸಲಾಗುವುದೆ?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಬೆಂಗಳೂರು ನಗರದಲ್ಲಿ ಎರಡು ತಿಂಗಳಿಗೊಮ್ಮೆವಿದ್ಯುತ್ ಬಿಲ್ಲು ನೀಡುವ ವ್ಯವಸ್ಥೆಗೆ ಆಯ್ಕೆ ಮಾಡಲಾದ ಪ್ರದೇಶಗಳ ವಿವರಗಳು ಕೆಳಕಂಡಂತಿದೆ.

1) ಸಿ-3 ಉಪ ವಿಭಾಗ	-	ಮತ್ತಿಕೆರೆ
2) ಸಿ-4 ಉಪ ವಿಭಾಗ	-	ಹೆಬ್ಬಾಳ್
3) ಸಿ-2 ಉಪ ವಿಭಾಗ	-	ಮಲ್ಲೇಶ್ವರಂ
4) ಡಬ್ಲ್ಯೂ-2 ಉಪವಿಭಾಗ	-	ಚಾಮರಾಜ ಪೇಟೆ
5) ಡಬ್ಲ್ಯೂ-1ಉಪವಿಭಾಗ	-	ಎನ್.ಆರ್.ಕಾಲೋನಿ
6) ಎನ್-2 ಉಪವಿಭಾಗ	-	ವಿಜಯನಗರ
7) ಎನ್-3 ಉಪ ವಿಭಾಗ	-	ಬಸವೇಶ್ವರನಗರ
8) ಎನ್-1 ಉಪ ವಿಭಾಗ	-	ರಾಜಾಜಿನಗರ